

ಇಂಗ್ಲೆಂಡ್- ಆಸ್ಟ್ರೇಲಿಯಾಗಳ ತೀವ್ರ ಹಣಾಹಣಿಯ ಆಶಸ್ ಸರಣಿಯ ಫಲಿತಾಂಶ ನಿಚ್ಚಳವಾದ ಹೊತ್ತಲ್ಲಿ ಕ್ರಿಕೆಟ್ ಕುರಿತು ಮಾತನಾಡಿದರೆ, 2025ರ ಸಾಲಿನ ಬೇಸಿಗೆಯ ಕ್ರಿಕೆಟ್ ಮಾಸ ಮುಗಿದು ನಾಲ್ಕೈದು ತಿಂಗಳು ಕಳೆದ ಚಳಿಗಾಲದ ಇಂಗ್ಲೆಂಡಿನಲ್ಲಿ ವಿಷಯಾಂತರವೇನೂ ಆಗಲಿಕ್ಕಿಲ್ಲ. ಕಡುಚಳಿಯ ಪರೀಕ್ಷೆ ನಿರೀಕ್ಷೆಯಲ್ಲಿ ಮುಸುಕು ಹೊದ್ದು ಮಲಗಿರುವ ಇಂಗ್ಲೆಂಡಿನ ಕ್ರಿಕೆಟ್ ಮೈದಾನಗಳಿಂದ ಹದಿನೈದು ಸಾವಿರ ಕಿಲೋಮೀಟರು ದೂರದ ಬೆಚ್ಚನೆ ಬಿಸಿಲಿನ ಆಸ್ಟ್ರೇಲಿಯಾದಲ್ಲಿ ಈ ಸಲದ ಆಶಸ್ ಸರಣಿ ನಡೆದಿದೆ. ‘ಆಶಸ್’ ಆಂಗ್ಲ ಶಬ್ದದ ಕನ್ನಡ ರೂಪ ‘ಬೂದಿ’ ಎಂದಾದರೂ, ಈ ಎರಡು ತಂಡಗಳ ನಡುವೆ ನಡೆಯುವ ಸ್ಪರ್ಧೆ ಬೂದಿ ಮುಚ್ಚಿದ ಕೆಂಡದಂತೆ ಯಾವಾಗಲೂ ನಿಗಿನಿಗಿ. ಆದರೆ, ಸಾಂಪ್ರದಾಯಿಕ ಮತ್ತು ಕಲಾತ್ಮಕ ಕ್ರಿಕೆಟಿನ ಹೆಮ್ಮೆಯ ಐದು ದಿನಗಳ ಟೆಸ್ಟ್ ಮಾದರಿಯಲ್ಲಿಯೇ ವಿಶಿಷ್ಟ ಪರಂಪರೆ ಇರುವ ಆಸ್ಟ್ರೇಲಿಯಾ- ಇಂಗ್ಲೆಂಡ್ ನಡುವಿನ ಪ್ರಸಕ್ತ ಹಣಾಹಣಿಯ ಮೊದಲ ಐದು ದಿನಗಳ ಪಂದ್ಯ, ಎರಡೇ ದಿನಗಳಲ್ಲಿ ಮುಗಿದು ಹೋಗಿ ಇತಿಹಾಸಪ್ರಿಯ ಆಂಗ್ಲರ ಮಟ್ಟಿಗೆ ಕರಾಳ ಚರಿತ್ರೆಯಾಗಿ ದಾಖಲಾಗಿದೆ. ಮುಂದಿನ ಪಂದ್ಯಗಳಲ್ಲೂ ಆಸ್ಟ್ರೇಲಿಯಾ ಜಯಗಳಿಸಿ ಐದು ಪಂದ್ಯಗಳ ಸರಣಿಯ ಹೆಚ್ಚಿನ ಪಂದ್ಯಗಳಲ್ಲಿ ಗೆದ್ದ ಆಧಾರದ ಮೇಲೆ 2025-2026ರ ಆಶಸ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ.

ಕ್ರಿಕೆಟ್ ಇತಿಹಾಸದಲ್ಲಿ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳ ನಡುವಿನ ಮೊತ್ತಮೊದಲ ಟೆಸ್ಟ್ ಪಂದ್ಯ1877ರಲ್ಲಿ ನಡೆದಿದ್ದರೂ, ಆಶಸ್ ಮಾದರಿಯ ಸರಣಿ ಶುರು ಆದದ್ದು 1882ರಲ್ಲಿ. ಲಂಡನ್ನಿನ ಓವಲ್ ಅಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಇಂಗ್ಲೆಂಡ್ ಸೋತಿತ್ತು. ‘ಸ್ಪೋರ್ಟಿಂಗ್ ಟೈಮ್ಸ್’ ಪತ್ರಿಕೆ ಅಂದಿನ ಸೋಲನ್ನು ಆಂಗ್ಲ ಕ್ರಿಕೆಟಿನ ಸಾವೆಂದು ಗೇಲಿ ಮಾಡಿತ್ತು. ‘ಆಂಗ್ಲ ಕ್ರಿಕೆಟಿನ ಶವಸಂಸ್ಕಾರ ಮಾಡಲಾಗುತ್ತದೆ, ಬೂದಿಯನ್ನು ಆಸ್ಟ್ರೇಲಿಯಾಕ್ಕೆ ಒಯ್ಯಲಾಗುತ್ತದೆ’ ಎಂದು ಅಣಕು ಸಂತಾಪ ಸೂಚಿಸಿತ್ತು. ಪತ್ರಿಕೆ ಪ್ರಕಟಿಸಿದ ಅಣಕು ಪದವನ್ನೇ ಬಳಸಿಕೊಂಡು ಆಗಿನ ಇಂಗ್ಲೆಂಡ್ ತಂಡದ ನಾಯಕ, ಮುಂದಿನ